# ಶ್ರೀ ಶಾರದಾದೇವಿಯವರ ಕಾಶೀಯಾತ್ರೆ

ಸ್ವಾಮಿ ರಾಘವೇಶಾನಂದ

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಶ್ರೀಮಾತೆಯವರು ಕಾಶಿ, ವೃಂದಾವನ ಮೊದಲಾದ ತೀರ್ಥಕ್ಷೇತ್ರಗಳಿಗೆ ಯಾತ್ರೆ ಹೋಗಿದ್ದರು. ಈ ಬಗ್ಗೆ ವಿವರಿಸಿರುವ ಪೂಜ್ಯ ಸ್ವಾಮೀಜಿಯವರು ಉದಕಮಂಡಲ ರಾಮಕೃಷ್ಣ ಮಠದ ಮುಖ್ಯಸ್ಥರು. ಉತ್ತಮ ವಾಗ್ಮಿಗಳು ಮತ್ತು ಸಂಘಟಕರಾಗಿರುವ ಸ್ವಾಮೀಜಿಯವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.

ಶ್ರೀಮಾತೆ ಶಾರದಾದೇವಿಯವರು ೧೮೮೬ರ ತಮ್ಮ ತೀರ್ಥಯಾತ್ರೆಯ ಸಂದರ್ಭದಲ್ಲಿ ಕಾಶಿಗೆ ಹೋದರು. ಅವರು ಮೊದಲ ಬಾರಿಯ ತಮ್ಮ ಕಾಶಿಯಾತ್ರೆಯ ಸಮಯದಲ್ಲಿ ೧೦ ದಿವಸಗಳ ಕಾಲ ಕಾಶಿಯಲ್ಲಿದ್ದರು.

ಮಹಾಪುರುಷರುಗಳು ಪವಿತ್ರ ಸ್ಥಳಗಳಿಗೆ ಭೇಟಿಕೊಟ್ಟು ಅಂತಹ ಸ್ಥಳಗಳನ್ನು ಪವಿತ್ರಗೊಳಿಸುತ್ತಾರೆ ಎಂದು ಶಾಸ್ತ್ರಗಳು ತಿಳಿಸುತ್ತವೆ. ತಮ್ಮ ಭಕ್ತಿ ಮತ್ತು ಆರಾಧನೆ, ಜಪ ಮತ್ತು ಧ್ಯಾನ, ಪ್ರಾರ್ಥನೆ ಮತ್ತು ಕಣ್ಣೀರು, ಉಪವಾಸ ಮತ್ತು ಕಾಠಿಣ್ಯ, ಜಾಗರಣೆ ಮತ್ತು ಹಂಬಲಗಳ ಮೂಲಕ ಯಾತ್ರಿಕರು ಪ್ರಪಂಚದ ಪವಿತ್ರ ಸ್ಥಳಗಳನ್ನು ಇನ್ನಷ್ಟು ಪವಿತ್ರಗೊಳಿಸುತ್ತಾರೆ. ಬೃಂದಾವನ, ಅಯೋಧ್ಯೆ ಮತ್ತು ದ್ವಾರಕೆ ಹಾಗೂ ಭಾರತದ ಇತರ ಪವಿತ್ರ ಸ್ಥಳಗಳು ಯುಗಯುಗಾಂತರಗಳಿಂದ ಯಾತ್ರಾರ್ಥಿಗಳನ್ನು ಆಕರ್ಷಿಸಿವೆ.

ಗೃಹಸ್ಥರು ಇಂತಹ ಪವಿತ್ರ ಸ್ಥಳಗಳಿಗೆ ಭೇಟಿ ನೀಡುವುದರಿಂದ ಅದು ಅವರ ಮನೆ ಮತ್ತು ಕುಟುಂಬದೊಂದಿಗಿನ ಬಾಂಧವ್ಯವನ್ನು ಕಡಿತಗೊಳಿಸುತ್ತದೆ ಮತ್ತು ದೇವರ ಮೇಲಿನ ಹಂಬಲವನ್ನು ಹೆಚ್ಚಿಸುತ್ತದೆ. ಪ್ರಪಂಚದಿಂದ ದೂರವಿರುವುದರಿಂದ ಭಕ್ತನ ದೈವೀ ಆನಂದದ ಅನುಭವವು ಸುಲಭವಾಗಿ ಸಾಧ್ಯವಾಗುತ್ತದೆ.

ಶ್ರೀಮಾತೆಯವರು ಕಲ್ಕತ್ತೆಯಿಂದ ಕಾಶಿಗೆ ಹೋಗುವಾಗ, ಅಲ್ಲಿ ಆಗಲೇ ರಾಮಕೃಷ್ಣ ಮಠ ಸ್ಥಾಪಿತವಾಗಿತ್ತು. ಶ್ರೀಮಾತೆಯವರು ಅಲ್ಲಿಗೆ ತಲುಪಿ ವಿಶ್ರಾಂತಿ ತೆಗೆದುಕೊಂಡು, ಬಳಿಕ 'ಲಕ್ಷ್ಮೀ ನಿವಾಸ'ಕ್ಕೆ ಹೊರಟರು. ಇದು ಕಲ್ಕತ್ತದ ಒಬ್ಬ ಭಕ್ತರು ಕಟ್ಟಿಸಿದ ಹೊಸ ಮನೆ. ಅಲ್ಲಿ ಶ್ರೀಮಾತೆಯವರು ಸುಮಾರು ಎರಡೂವರೆ ತಿಂಗಳು ಉಳಿದುಕೊಂಡರು. ಆ ಮನೆಯ ವಿಶಾಲವಾದ ಜಗಲಿಯನ್ನು ನೋಡಿ ಬಹಳ ಆನಂದಪಟ್ಟು ಹೇಳಿದರು: ''ನಮಗೆ ಬಹಳ ವಿಶಾಲವಾದ ಸ್ಥಳ ಸಿಕ್ಕಿದೆ. ನಿಜಕ್ಕೂ ನಮ್ಮ ಅದೃಷ್ಟ. ಸಂಕುಚಿತವಾದ ಸ್ಥಳ ಮನಸ್ಸನ್ನು ಸಂಕುಚಿತಗೊಳಿಸುತ್ತದೆ. ವಿಶಾಲವಾದ ಸ್ಥಳ ಮನಸ್ಸನ್ನು ವಿಶಾಲಗೊಳಿಸುತ್ತದೆ.''



ಮಾರನೆಯ ದಿನ ವಿಶ್ವನಾಥ, ಅನ್ನಪೂರ್ಣೆಯ ದರ್ಶನ ಮಾಡಲು ದೇವಸ್ಥಾನಕ್ಕೆ ಹೋದರು. ಶಿವನಿಗೆ ಮಾಡಿದ ಸಂಧ್ಯಾರತಿಯನ್ನು ನೋಡುತ್ತಾ ಸಮಾಧಿಸ್ಥರಾದರು. ಬಹಳ ಅಂತರ್ಮುಖಿಯಾಗಿಬಿಟ್ಟಿದ್ದುದ್ದರಿಂದ, ಹೊರಪ್ರಪಂಚವನ್ನೇ ಮರೆತರು. ತಮ್ಮ ನಿವಾಸಕ್ಕೆ ಹಿಂದಿರುಗಲು ಬಹಳ ಕಷ್ಟವಾಯಿತು. ನಂತರ ಹೇಳಿದರು: ''ಶ್ರೀರಾಮಕೃಷ್ಣರೇ ನನ್ನನ್ನು ಕೈಹಿಡಿದು ಕರೆದುಕೊಂಡು ಬಂದರು.''

ಸ್ವಾಮಿ ಅದ್ಭುತಾನಂದರು ಈ ಘಟನೆಯ ಬಗ್ಗೆ ನಂತರ ಹೀಗೆ ಹೇಳಿದರು: ''ಒಂದು ಸಂಜೆ ಶ್ರೀಮಾತೆಯ ಜೊತೆ ನಾವು ವಿಶ್ವನಾಥ ಮಂದಿರಕ್ಕೆ ಸಂಧ್ಯಾರತಿಯನ್ನು ನೋಡಲು ಹೋಗಿದ್ದೆವು.

ಶ್ರೀಮಾತೆಯವರು ಬಾಹ್ಯಾವಸ್ಥೆಯನ್ನು ಕಳೆದುಕೊಂಡಿದ್ದರು. ಬಹಳ ಭಾರವಾದ ಹೆಜ್ಜೆಯನ್ನಿಡುತ್ತಾ ಬಹಳ ವೇಗವಾಗಿ ನಡೆದರು. ಎಷ್ಟು ವೇಗವೆಂದರೆ ನಮಗೆ ಅವರ ವೇಗಕ್ಕೆ ನಡೆಯುವುದು ಬಹಳ ಕಷ್ಟವಾಗಿತ್ತು. ನಿವಾಸ ತಲುಪಿದ ತಕ್ಷಣ, ಮಂಚದ ಮೇಲೆ ಮಲಗಿಬಿಟ್ಟರು. ಒಂದು ಮಾತನ್ನೂ ಆಡಲಿಲ್ಲ. ಸುಮಾರು ಮಧ್ಯರಾತ್ರಿಯ ಒಳಗಾಗಿ ಎದ್ದು ಕುಳಿತು ಧ್ಯಾನಸ್ಥರಾದರು. ಮಾರನೆಯ ದಿನ ಬೆಳಗ್ಗೆ ಗೋಲಾಪ್ ಮಾ, ಅವರನ್ನು ಎಚ್ಚರಗೊಳಿಸಲು ಮತ್ತೆ ಮತ್ತೆ ಕೂಗಿದರು. ಆದರೂ ಅವರು ಮೇಲೇಳಲು ಬಹಳ ಹೊತ್ತೇ ಹಿಡಿಯಿತು.''

ಮತ್ತೊಂದು ದಿನ ಸ್ವಾಮಿ ಭಾಸ್ಕರಾನಂದರೆಂಬ ಸಂತರನ್ನು ಭೇಟಿ ಮಾಡಲು ಹೊರಟರು. ಅವರೊಬ್ಬರು ಕಾಶಿಯಲ್ಲಿ ವಾಸ ಮಾಡುತ್ತಿದ್ದ ಮಹಾ ಸಂತರು. ಅವರು ಯಾವಾಗಲೂ ಪೂರ್ಣ ನಗ್ನರಾಗಿಯೇ ಇರುತ್ತಿದ್ದರು. ಅವರನ್ನು ಶ್ರೀಮಾತೆ ಭೇಟಿ ಮಾಡಿದಾಗ ಅವರು, ''ತಾಯೇ, ನನ್ನ ನಗ್ನಾವಸ್ಥೆಯನ್ನು ನೋಡಿ ಸಂಕೋಚಪಟ್ಟುಕೊಳ್ಳಬೇಡಿ. ತಾವೆಲ್ಲರೂ ಜಗನ್ಮಾತೆಯ ಪ್ರತೀಕಗಳು. ಸಂಕೋಚಪಡಬೇಕಾದ ಆವಶ್ಯಕತೆಯೇ ಇಲ್ಲ. ನನ್ನ ಜನನಾಂಗ ಮತ್ತೊಂದು ಕೈಬೆರಳಿನಂತೆ ಅಷ್ಟೇ''. ಶ್ರೀಮಾತೆಯವರು ಅಲ್ಲಿಂದ ಹಿಂದಿರುಗಿದ ಮೇಲೆ ಹೇಳಿದರು. ''ಅವರು ಎಂತಹ ಶಾಂತ, ದೊಡ್ಡ ಮಹಾತ್ಮರು! ಚಳಿಗಾಲ, ಬೇಸಿಗೆ, ಎಲ್ಲಾ ಕಾಲದಲ್ಲಿಯೂ ನಗ್ನರಾಗಿಯೇ ಇರುತ್ತಾರೆ.''

ಅವರು ಕಾಶಿಯಲ್ಲಿದ್ದಾಗ ಒಬ್ಬ ನೇಪಾಳೀ ಸಂನ್ಯಾಸಿನಿ ಅಗಾಗ್ಗೆ ಬಂದು ಶ್ರೀಮಾತೆಯವರನ್ನು ಭೇಟಿ ಮಾಡುತ್ತಿದ್ದರು. ಈ ಸಂನ್ಯಾಸಿನಿ ಹಲವಾರು ರೀತಿಯ ಪೂಜೆಗಳನ್ನೂ ಆಧ್ಯಾತ್ಮಿಕ ಸಾಧನೆಗಳನ್ನೂ ಅರಿತವಳಾಗಿದ್ದಳು. ಅವಳು ಶ್ರೀಮಾತೆಯವರ ಆಗಿನ ಮನಃಸ್ಥಿತಿಯನ್ನು ಗಮನಿಸಿದರು ಮತ್ತು ಅವರಿಗೆ ಪಂಚ ತಪಸ್ಸನ್ನು ಮಾಡಲು ತಿಳಿಸಿದರು.

ಒಂದಿ ದಿನ ಶ್ರೀಮಾತೆಯವರು ಶ್ರೀರಾಮಕೃಷ್ಣ ಮಹಾ ಸಂಘಕ್ಕೆ ಸೇರಿದ ರಾಮಕೃಷ್ಣ ಸೇವಾಶ್ರಮಕ್ಕೆ ಭೇಟಿಯಿತ್ತರು. ಈ ಆಶ್ರಮದಲ್ಲಿ ಸತತವಾಗಿ ರೋಗಿಗಳ ಶುಶ್ರೂಷೆ ನಡೆಯುವ ಆಸ್ಪತ್ರೆಯಿದೆ. ಅಲ್ಲಿಯ ಸ್ವಾಮಿ ಅಚಲಾನಂದರು ಶ್ರೀಮಾತೆಯವರನ್ನು ಬರಮಾಡಿಕೊಂಡು ಅವರನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಆಶ್ರಮದ ಸುತ್ತಮುತ್ತಲೆಲ್ಲವನ್ನೂ ತೋರಿಸಿಕೊಂಡು ಬಂದರು. ಶ್ರೀಮಾತೆಯವರು ಬಾಲಕಿಯಂತೆ ಕುತೂಹಲವನ್ನು ತೋರಿಸುತ್ತಾ ಪ್ರತಿಯೊಂದು ವಿಷಯವನ್ನೂ ವಿವರವಾಗಿ ಕೇಳಿ ತಿಳಿದುಕೊಳ್ಳುತ್ತಿದ್ದರು. ಶ್ರೀಮಾತೆಯವರು ಅಲ್ಲಿಂದ ಹಿಂದಿರುಗಿದ ಮೇಲೆ ಮನಸಾರೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಅವರು ಹೇಳಿದ ಮಾತು ಕಾಶಿಗೆ ಇನ್ನೂ ಹೆಚ್ಚು ಮೆರುಗು ಕೊಟ್ಟಿತು: ''ಶ್ರೀರಾಮಕೃಷ್ಣರು ಸ್ವತಃ ಇಲ್ಲಿ ವಿರಾಜಮಾನರಾಗಿದ್ದಾರೆ. ಲಕ್ಷ್ಮಿ ಇಲ್ಲಿ ಪೂರ್ಣರೂಪದಿಂದ ನೆಲೆಗೊಂಡಿದ್ದಾಳೆ.''

ನಂತರ ಶ್ರೀಮಾತೆಯವರು ಸೇವಾಶ್ರಮ ಹೇಗೆ ರೂಪುಗೊಂಡಿತು ಎನ್ನುವುದರ ಬಗ್ಗೆ ಪೂರ್ಣ ವಿವರ ತಿಳಿಯಲು ಇಷ್ಟಪಟ್ಟರು. ಆಶ್ರಮದ ಮುಖ್ಯಸ್ಥರಾಗಿದ್ದ ಸ್ವಾಮಿ ಅಚಲಾನಂದರು ಆಶ್ರಮ ನಿರ್ಮಾಣದ ಪೂರ್ಣಕಥೆಯನ್ನು ವಿವರಿಸಿದಾಗ ಶ್ರೀಮಾತೆಯವರು ಉದ್ಗರಿಸಿದರು: ''ಆಹ! ಎಷ್ಟು ಚೆನ್ನಾಗಿದೆ ಈ ಸ್ಥಳ! ನನಗೆ ಇಲ್ಲೇ ಕಾಶಿಯಲ್ಲೇ ಇದ್ದುಬಿಡೋಣ ಅನ್ನಿಸುತ್ತಿದೆ!'' ನಂತರ ಸುಪ್ರೀತರಾದ ಶ್ರೀಮಾತೆಯವರು ತಮ್ಮ ನಿವಾಸಕ್ಕೆ ಹಿಂದಿರುಗಿದರು. ಅವರು ಹೋದ ಸ್ವಲ್ಪ ಹೊತ್ತಿನಲ್ಲೇ ಶಿಷ್ಯನೊಬ್ಬ ಒಂದು ಹತ್ತು ರೂಪಾಯಿ ನೋಟನ್ನು ತಂದು ಸೇವಾಶ್ರಮದ ಅಧ್ಯಕ್ಷರ ಕೈಯಲ್ಲಿಟ್ಟು ಹೇಳುತ್ತಾನೆ: ''ಶ್ರೀಮಾತೆಯವರು ಇದನ್ನು ಕಳುಹಿಸಿದ್ದಾರೆ. ಸೇವಾಶ್ರಮಕ್ಕೆ ಇದು ಅವರ ಕಾಣಿಕೆ. ದಯವಿಟ್ಟು ಸ್ವೀಕರಿಸಿಬೇಕು'' ಎಂದು. ಶ್ರೀಮಾತೆಯವರು ಕೊಟ್ಟ ಆ ಹತ್ತು ರೂಪಾಯಿಯ ಹಿನ್ನೆಲೆಯಲ್ಲಿರುವ ಅವರ ಅಪಾರ ಕೃಪೆಯನ್ನು ಗಮನಿಸಬೇಕು. ಅವರು ಅಂದು ಕೊಟ್ಟ ಆ ಹತ್ತು ರೂಪಾಯಿ ನೋಟು ಇಂದಿಗೂ ಅಲ್ಲಿದೆ. ಅದನ್ನು ತುಂಬಾ ಜೋಪಾನವಾಗಿ ಸಂರಕ್ಷಿಸಿ ಇಡಲಾಗಿದೆ.

ಒಬ್ಬ ಭಕ್ತ ಒಮ್ಮೆ ಅವರನ್ನು ಆ ಸೇವಾಶ್ರಮದ ಭೇಟಿಯ ಬಗ್ಗೆ ವಿಚಾರಿಸಿದ. ಆಗ ಶ್ರೀಮಾತೆಯವರು ಹೇಳಿದರು: ''ಅಲ್ಲಿ ಶ್ರೀರಾಮಕೃಷ್ಣರೇ ಸ್ವತಃ ಇರುವ ಹಾಗೆ ನಾನು ಕಂಡೆ. ಇವೆಲ್ಲ ಅವರ ಕಾರ್ಯವೇ ಸರಿ'' ಎಂದರು. ಸ್ವಾಮಿ ಬ್ರಹ್ಮಾನಂದರು ಬೆಳಗಿನ ವಾಯುಸಂಚಾರದ ಸಮಯದಲ್ಲಿ ಶ್ರೀಮಾತೆಯವರು ವಾಸವಾಗಿದ್ದ ಲಕ್ಷ್ಮೀನಿವಾಸಕ್ಕೆ ಭೇಟಿಕೊಟ್ಟು ಅಲ್ಲಿ ಗೋಲಾಪ್ ಮಾ ಮೂಲಕ ಶ್ರೀಮಾತೆಯವರ ದೇಹಾರೋಗ್ಯದ ಕುರಿತು ಕೇಳಿ ತಿಳಿದುಕೊಳ್ಳುತ್ತಿದ್ದರು. ಅಂದು ಗೋಲಾಪ್ ಮಾ ಮಹಡಿಯ ಮೇಲಿನಿಂದಲೇ ಬ್ರಹ್ಮಾನಂದರನ್ನು ಕೇಳಿದಳು, ''ರಾಖಾಲ್, ಶ್ರೀಮಾತೆಯವರು ನಿನ್ನನ್ನು ಕೇಳುತ್ತಿದ್ದಾರೆ, 'ಶಕ್ತಿಯನ್ನು ಮೊದಲು ಪೂಜಿಸುತ್ತಾರಲ್ಲ ಏಕೆ?' ಅಂತ.'' ಅದಕ್ಕೆ ಸ್ವಾಮಿ ಬ್ರಹ್ಮಾನಂದರು ಹೇಳುತ್ತಾರೆ: ''ಏಕೆಂದರೆ ಬ್ರಹ್ಮಜ್ಞಾನದ ಕೀಲಿಕೈ ಇರುವುದು ಆದ್ಯಾಶಕ್ತಿಯಾದ ಜಗನ್ಮಾತೆಯ ಕೈಯಲ್ಲಿ ತಾನೆ! ಜಗನ್ಮಾತೆ ಕೃಪೆ ಮಾಡಿ ಬಾಗಿಲು ತೆಗೆಯದಿದ್ದರೆ ಬೇರೆ ದಾರಿಯೇ ಇಲ್ಲ'' ಎಂದು.

ಶ್ರೀಮಾತೆಯವರು ಕಾಶಿಯ ಹಲವಾರು ದೇವದೇವಿಯವರ ದರ್ಶನ ಮಾಡಿದರು. ಒಂದು ಸಂಜೆ ಕಾಶಿಯ ಕೇದಾರನಾಥ ದೇವಸ್ಥಾನಕ್ಕೆ ಹೋದರು. ಅಲ್ಲಿ ಸಂಧ್ಯಾರತಿಯನ್ನು ನೋಡಿದರು. ಶ್ರೀಮಾತೆಯವರು ಕೇದಾರನಾಥನನ್ನು ನೋಡಿ ಹೇಳುತ್ತಾರೆ: ''ಅಲ್ಲಿನ ಹಿಮಾಲಯದ ಕೇದಾರನಾಥ, ಇಲ್ಲಿ ಕಾಶಿಯ ಕೇದಾರನಾಥ – ಇಬ್ಬರೂ ಒಂದೇ: ಇಬ್ಬರಿಗೂ ಸಂಬಂಧವಿದೆ. ಈ ಕೇದಾರನಾಥನನ್ನು ನೋಡಿದರೆ ಆ ಕೇದಾರನಾಥನನ್ನು ನೋಡಿದಂತೆಯೇ. ಇದು ತುಂಬಾ ಜಾಗೃತ ದೇವತೆ'' ಎಂದು.

ಶ್ರೀಮಾತೆಯವರು ಕಾಶಿಯಲ್ಲಿ ಇಬ್ಬರು ಸಾಧುಗಳನ್ನು ಸಂದರ್ಶಿಸಿದರು. ಅವರಲ್ಲಿ ಒಬ್ಬರು ನಾನಕ ಪಂಥಿ ಸಾಧು; ಇನ್ನೊಬ್ಬರು ಚಮೇಲಿಪುರಿ. ಈ ನಾನಕ ಪಂಥಿ ಸಾಧುಗಳು ಗಂಗೆಯ ದಡದ ಮೇಲೆ ವಾಸವಾಗಿರುತ್ತಿದ್ದರು. ಶ್ರೀಮಾತೆಯವರು ಅವರ ಪಾದಗಳಲ್ಲಿ ಒಂದು ರೂಪಾಯಿ ಕಾಣಿಕೆ ಇಟ್ಟು ನಮಸ್ಕರಿಸಿದರು. ಚಮೇಲಿಪುರಿಗಳು ತುಂಬಾ ಮುದುಕರು. ಅವರನ್ನು ಸಂದರ್ಶಿಸಿದಾಗ ಗೋಲಾಪ್ ಮಾ ಅವರನ್ನು ಕೇಳುತ್ತಾಳೆ: ''ನಿಮಗೆ ಊಟ ಯಾರು ಕೊಡುತ್ತಾರೆ?'' ಎಂದು. ಅದಕ್ಕೆ ಆ ಸಾಧುಗಳು ದೃಢಭಾವದಿಂದ ಹೇಳುತ್ತಾರೆ: ''ಮತ್ತಿನ್ನಾರು? ನಮ್ಮ ದುರ್ಗಾಮಾಯಿಯೇ ಕೊಡುತ್ತಾಳೆ''ಎಂದು. ಈ ಮಾತುಗಳನ್ನು ಹೇಳುವಾಗ ಆ ಸಾಧುಗಳ ಧ್ವನಿಯಲ್ಲಿ ದೃಢ ವಿಶ್ವಾಸವನ್ನು ಕಾಣಬಹುದಾಗಿತ್ತು. ಆ ಸಾಧುಗಳ ಅಪರಿಮಿತ ವಿಶ್ವಾಸ ಶ್ರೀಮಾತೆಯವರಿಗೆ ಸಂತಸ ತಂದಿತ್ತು. ನಂತರ ಹೇಳುತ್ತಾರೆ: ''ಆಹ! ಮುದುಕನ ಮುಖವೇ ನನ್ನ ಕಣ್ಣ ಮುಂದೆ ಬರುತ್ತಿದೆ. ಮುದುಕನಾದರೂ ಮುಖದಲ್ಲಿ ಮಗುವಿನ ಕಳೆ!'' ಎಂದು. ಮಾರನೆಯ ದಿನ ಶ್ರೀಮಾತೆಯವರು ಆ ಸಾಧುಗಳಿಗೆ ಒಂದಿಷ್ಟು ಕಿತ್ತಳೆ ಹಣ್ಣು , ಸಿಹಿತಿಂಡಿ, ಒಂದು ಕಂಬಳಿ ಇವನ್ನೆಲ್ಲ ಕಳುಹಿಸಿಕೊಟ್ಟರು.

ಮರುದಿನ ಭಕ್ತರೊಬ್ಬರು, ''ಇನ್ನೂ ಕೆಲವು ಸಾಧುಗಳನ್ನು ಸಂದರ್ಶಿಸೋಣವೆ?'' ಎಂದು ಕೇಳಿದರು. ಅದಕ್ಕೆ ಶ್ರೀಮಾತೆಯವರು ಹೇಳುತ್ತಾರೆ: ''ಇನ್ನಾವ ಸಾಧುಗಳನ್ನು ನಾನು ನೋಡಬೇಕಾಗಿದೆ? ಆ ಸಾಧುಗಳನ್ನು ನಾನು ನೋಡಿದೆನಲ್ಲ, ನಿಜಕ್ಕೂ ಸಾಧುಗಳು ಅಂದರೆ ಅವರು.''

ಒಂದು ದಿನ ಅವರು ಕಾಶಿಯ ಸ್ಥಳಪುರಾಣವನ್ನು ತಿಳಿಸುವ ಕಾಶೀಕಾಂಡವನ್ನು ಓದಿಸಿ ಕೇಳಿದರು. ಮತ್ತೊಂದು ದಿನ ಶ್ರೀಕೃಷ್ಣನ ದಿವ್ಯಲೀಲೆಗಳನ್ನು ಅವರಿಗಾಗಿ ಅಭಿನಯಿಸಿ ತೋರಿಸಲಾಯಿತು. ಶ್ರೀಕೃಷ್ಣ ಹಾಗೂ ರಾಧೆಯ ಪಾತ್ರಗಳನ್ನು ಅಭಿನಯಿಸಿ ತೋರಿಸಿದ ಇಬ್ಬರು ಹುಡುಗರಿಗೆ ಶ್ರೀಮಾತೆಯವರು ಕಾಣಿಕೆ ಕೊಟ್ಟು ನಮಸ್ಕರಿಸಿದರು.

ಇನ್ನೊಂದು ದಿನ ಎರಡು ಗಂಟೆಗಳ ಕಾಲ ಭಾಗವತ ವಾಚನವನ್ನು ಕೇಳಿದರು. ಇದಲ್ಲದೆ ಪ್ರತಿದಿನ ಸಾಯಂಕಾಲ ಸ್ವಾಮಿ ಗಿರಿಜಾನಂದರು ಶ್ರೀಮಾತೆಯವರಿಗೆ ಭಾಗವತವನ್ನು ಓದಿ ಹೇಳುತ್ತಿದ್ದರು. ಶ್ರೀಮಾತೆಯವರು ಅಲ್ಲಿದ್ದಾಗಲೇ ಅವರ ಜನ್ಮದಿನ ಬಂತು. ಅದನ್ನು ಆಶ್ರಮದ ಸಾಧುಗಳು ಬಹಳ ಸಂಭ್ರಮದಿಂದ ಆಚರಿಸಿದರು.

ಮತ್ತೊಂದು ದಿನ ಕಾಶಿಯ ಕೆಲವು ಸ್ಥಳೀಯ ಮಹಿಳೆಯರು ಶ್ರೀಮಾತೆಯವರನ್ನು ನೋಡುವುದಕ್ಕೆಂದು ಬಂದರು. ಅಲ್ಲಿ ಅವರು ಕಂಡದ್ದೇನೆಂದರೆ, ಶ್ರೀಮಾತೆಯವರು ರಾಧಿ ಹಾಗೂ ಭೂದೇವ ಅವರಿಗೆ ತಲೆ ಬಾಚುವುದು, ಬಟ್ಟೆ ತೊಡಿಸುವುದು ಇದೇ ಮೊದಲಾದ ಕೆಲಸದಲ್ಲಿ ಮಗ್ನರಾಗಿದ್ದರು. ಇದನ್ನೆಲ್ಲ ನೋಡಿದ ಆ ಮಹಿಳೆಯರಿಗೆ ಅನ್ನಿಸಿತು, ಇದೂ ಒಂದು ಸಂಸಾರವೇ ಎಂದು. ಆ ಮಹಿಳೆಯರಲ್ಲಿ ಒಬ್ಬಳಂತೂ ಒದರಿಯೇ ಬಿಟ್ಟಳು: ''ಅಮ್ಮ, ಇದೇನಿದು? ನೀವು ಕೂಡ ಈ ಮಾಯೆಯೊಳಗೆ ಗಾಢವಾಗಿ ಮುಳುಗಿಬಿಟ್ಟಿದ್ದೀರಲ್ಲಾ!'' ಎಂದು. ಅದಕ್ಕೆ ಶ್ರೀಮಾತೆಯವರು ಶಾಂತವಾಗಿಯೇ ಉತ್ತರಿಸಿದರು: ''ಏನು ಮಾಡಲಿ ಹೇಳು? ಸ್ವತಃ ನಾನೇ ಮಾಯೆ!'' ಎಂದು. ಟೀಕೆ ಮಾಡಿದ ಮಹಿಳೆ ತೆಪ್ಪಗಾದಳು.

ಇನ್ನೊಂದು ದಿನ ಮತ್ತೆ ಕೆಲವು ಸ್ತ್ರೀಯರು ಶ್ರೀಮಾತೆಯ ದರ್ಶನಕ್ಕೆ ಬಂದರು. ಶ್ರೀಮಾತೆಯವರು ಕಾಶಿಯ ಆ ಹೊಸ ಮನೆಯ ವಿಶಾಲವಾದ ಜಗಲಿಯ ಒಂದು ಬದಿಯಲ್ಲಿ ಕುಳಿತಿದ್ದರು. ಮತ್ತೊಂದು ಬದಿಯಲ್ಲಿ ಗೋಲಾಪ್ ಮಾ ಹಾಗೂ ಮತ್ತಿತರ ಭಕ್ತೆಯರು ಕುಳಿತಿದ್ದರು. ಗೋಲಾಪ್ ಮಾ ದಷ್ಟಪುಷ್ಟಳಾಗಿ ಬೆಳೆದವಳಾಗಿದ್ದಳು. ಬಂದಿದ್ದವರು ಗೋಲಾಪ್ ಮಾಳನ್ನೇ ಶ್ರೀಮಾತೆಯವರೆಂದು ಭಾವಿಸಿ ನಮಸ್ಕರಿಸಲು ಹೋದರು. ಗೋಲಾಪ್ ಮಾ ತಕ್ಷಣ ಅರ್ಥಮಾಡಿಕೊಂಡು, ''ನೋಡಿ, ಶ್ರೀಮಾತೆಯವರು ಅಲ್ಲಿ ಕುಳಿತಿದ್ದಾರೆ'' ಎಂದು ಕೈ ತೋರಿಸಿದರು. ಆದರೂ ಆ ಮಹಿಳೆ ಅವರ ಮಾತನ್ನು ನಂಬಲಿಲ್ಲ. ಅಲ್ಲೇ ಕುಳಿತು ಗೋಲಾಪ್ ಮಾ ಜೊತೆ ಸಂಭಾಷಣೆಗೆ ತೊಡಗಿದಳು. ಆಗ ಗೋಲಾಪ್‌ಮಾ ಪುನಃ ಒತ್ತಿ ಹೇಳಿದರು: ''ನಾನಲ್ಲ ಶ್ರೀಮಾತೆ. ಅಲ್ಲಿ ಕುಳಿತಿದ್ದಾರಲ್ಲ, ಅವರು ಶ್ರೀಮಾತೆಯವರು'' ಎಂದು. ಆಗ ವಿಧಿಯಿಲ್ಲದೆ ಅವಳು ಶ್ರೀಮಾತೆಯವರ ಬಳಿಗೆ ಹೋದಳು. ಆದರೆ ಶ್ರೀಮಾತೆಯವರು ಈ ತಮಾಷೆಯನ್ನು ಇನ್ನಷ್ಟು ನೋಡೋಣ ಎಂದು ಆ ಮಹಿಳೆಗೆ ಹೇಳುತ್ತಾರೆ: ''ಇಲ್ಲ, ಇಲ್ಲ, ಅವರೇ ಶ್ರೀಮಾತೆಯವರು'' ಎಂದು. ಈಗ ಈ ಮಹಿಳೆಗೆ ಕಷ್ಟಕ್ಕಿಟ್ಟುಕೊಂಡಿತು – ನಿಜವಾದ ಶ್ರೀಮಾತೆಯವರು ಯಾರು ಎಂದು. ಅವರನ್ನು ಕೇಳಿದರೆ ಇವರನ್ನು ತೋರಿಸುತ್ತಾರೆ! ಇವರನ್ನು ಕೇಳಿದರೆ ಅವರನ್ನು ತೋರಿಸುತ್ತಾರೆ! ಇದರಿಂದಾಗಿ ಅವಳಿಗೆ ಸ್ವಲ್ಪ ನಾಚಿಕೆಯೂ ಆಯಿತು. ಆದ್ದರಿಂದ ಆಕೆ, ತಾನು ಇವರ ಮಾತಿಗೆ ಕಿವಿಗೊಡಬಾರದು, ತಾನು ಮೊದಲ ನೋಟದಲ್ಲೇ ಯಾರನ್ನು ಶ್ರೀಮಾತೆಯವರು ಎಂದು ತಿಳಿದುಕೊಂಡಿದ್ದನೋ ಅವರೇ ಶ್ರೀಮಾತೆಯವರು ಎಂದು ನಿರ್ಧಾರ ಮಾಡಿಕೊಂಡು ಗೋಲಾಪ್ ಮಾಳ ಹತ್ತಿರ ಬಂದಳು. ಆಗ ಗೋಲಾಪ್ ಮಾ ಆಕೆಗೆ ಕೊಂಚ ಗದರಿಸಿ ಹೇಳುತ್ತಾಳೆ: ''ಏನು, ನಿನಗೆ ಅಷ್ಟೂ ಗೊತ್ತಾಗುವುದಿಲ್ಲವೇ? ಶ್ರೀಮಾತೆಯವರ ಮುಖದಲ್ಲಿ ಬೆಳಗುವ ಆ ದಿವ್ಯಕಳೆಯನ್ನು ಗುರುತಿಸುವುದಕ್ಕಾಗುವುದಿಲ್ಲವೇ ನಿನಗೆ? ಮನುಷ್ಯರು ಯಾರಾದರೂ ಹಾಗೆ ಇರುವುದಕ್ಕೆ ಸಾಧ್ಯವೇನು?'' ಎಂದು. ನಿಜಕ್ಕೂ ಶ್ರೀಮಾತೆಯವರ ಕಣ್ಣುಗಳು ತುಂಬಾ ಅಪೂರ್ವ, ಅಸದೃಶ, ಪರಮ ಶಾಂತ. ಶ್ರೀಮಾತೆಯವರು ಕಾಶೀಯಾತ್ರೆಯನ್ನು ಮುಗಿಸಿ ಅಲ್ಲಿಂದ ಬೃಂದಾವನಕ್ಕೆ ತೆರಳಿದರು. ✸